ಬೇಡಿಕೆ ಬರುತ್ತದೆ ಅದನ್ನು ಪರಿಶೀಲನೆ ಮಾಡಿ ಮಾನ್ಯಮಂತ್ರಿಗಳು ಸೂಕ್ತ ಉತ್ತರವನ್ನು ಕೊಡುತ್ತಾರೆ.

ಶ್ರೀ ಎನ್.ಸಂಪಂಗಿ : ಮಾನ್ಯ ಅಧ್ಯಕ್ಷರೆ, ನಮ್ಮ ಬಾರಿಗೆ ಬಾಗೇಪಲ್ಲಿ–ಯದನ್ನೂ ಸಹ ಸೇರಿಸಿ.

ಅಧ್ಯಕ್ಷರು : ಆಯಿತು. ಶ್ರೀ ಗೂಳಿಹಟ್ಟಿಶೇಖರ್‌ರವರು ತಾವು ಕೇಳಿ.

8. ವಿಷಯ : ಭದ್ರಾ ಮೇಲ್ಕಂಡೆ ಏತ ನೀರಾವರಿ ಯೋಜನೆಯ ಪ್ಯಾಕೇಜ್–2 ರ ಕಾಮಗಾರಿಯಲ್ಲಿ ಕೆ.ಟಿ.ಪಿ.ಪಿ ಆಕ್ಟ್‌ನ್ನು ಉಲ್ಲಂಘಿಸಿರುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ ಶೇಖರ್ : ಮಾನ್ಯ ಅಧ್ಯಕ್ಷರೆ, Upper Bhadra lift irrigation package 2ರ ಕಾಮಗಾರಿ KTPP Act ಉಲ್ಲಂಘಿಸಿ ಒಂದು ಕಂಪನಿಗೆ ಟೆಂಡರ್ ಕೊಟ್ಟಿದ್ದಾರೆ. ಅದರಲ್ಲಿ ಸುಮಾರು ಮೂರು ಜನ ಬಿಡ್‌ದಾರರು ಇದ್ದರೆ ಒಬ್ಬರು 1020 ಕೋಟಿ ರೂಪಾಯಿಗಳಿಗೆ ಟೆಂಡರ್ ಹಾಕಿಕೊಂಡಿದ್ದರೆ 1032 ಕೋಟಿ ರೂಪಾಯಿ ಹಾಕಿದವರಿಗೆ ಪ್ಯಾಕೇಜ್ ಟೆಂಡರ್ ಅನ್ನು ಕೊಟ್ಟಿದ್ದಾರೆ. ಅದನ್ನು ಆಥಿಕ ಬಿಡ್ ಮತ್ತು technical bid ಕೊಡುವಂತಹ ಸಂದರ್ಭದಲ್ಲಿ ಮೂರು ಸದಸ್ಯರ ಕಮಿಟಿ ಎಂದು ಮಾಡಿದ್ದಾರೆ. ಆ ಮೂರು ಜನರ ಕಮಿಟಿಯಲ್ಲಿ ಅಧ್ಯಕ್ಷರಾದವರು L–1 ನ1032 ಕೋಟಿ ರುಪಾಯಿಗೆ ಹಾಕಿಕೊಂಡವರ favour ಆಗಿ ಮಾಡಿದ್ದಾರೆ. ಇನ್ನು ಇಬ್ಬರು ಸದಸ್ಯರಿದ್ದರಲ್ಲ ಅವರು ಯಾರು ಕಡಿಮೆಗೆ ಹಕಿದ್ದಾರೆ ಅವರಿಗೆ favour ಆಗಿ ಮಾಡಿದ್ದಾರೆ. ಇದರಲ್ಲಿ ಒಂದು ನಮಗೆ ಸಂಶಯ ಬರುವುದು ಎಂದರೆ ಯಾರು L-1 ಎಂದು ಹೇಳಿ 1032 ಕೋಟಿ ರೂಪಯಿಗೆ highest ಬಿಡ್ ಮಾಡಿರುವವರಿಗೆ ಕೊಟ್ಟಿದ್ದಾರೆ. ಆಗ ಯಾರು ಅಧ್ಯಕ್ಷರು ಇದ್ದರು ಆ ಅಧ್ಯಕ್ಷರಿಗೆ ಬಿಡಿಎಯಿಂದ ಒಂದು ಫಲಪ್ರದವಾಗಿ ಸೈಟ್ ಕೊಟ್ಟಿದ್ದಾರೆ. ಇವತ್ತು ಎಂಎಲ್‌ಎಗಳಿಗೂ ಹಾಗೂ ಮಂತ್ರಿಗಳಿಗೂ ಕೂಡ 'ಜಿ' ಕ್ಯಾಟಗಿರಿಯಲ್ಲಿ ಸೈಟ್ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇದರಲ್ಲಿ 1032 ಕೋಟಿ ರೂಪಾಯಿಗಳಿಗೆ Highest quote ಮಾಡಿದವರಿಗೆ ಟೆಂಡರ್ ಕೊಡಿಸಿರುವುದಕ್ಕೆ ಬಳುವಳಿಕೆಯಾಗಿ ಈ ಬಿಡಿಎ ಸೈಟ್ ಅನ್ನು ಕೊಟ್ಟಿದ್ದಾರೆ. ಅವರಿಗೆ 103 ಕೋಟಿ ರೂಪಾಯಿಗಳ mobilization advance

ಕೊಟ್ಟಿದ್ದಾರೆ. ಆ 103 ಕೋಟಿ ರೂಪಾಯಿಗಳು ಹೇಗೆ ಕರ್ಚಾಯಿತು? ಅಲ್ಲಿ ಏನು ಕೆಲಸಗಳು ಆಗಿದೆ? ಇದರಲ್ಲಿ ಟೆಂಡರ್ ಪಾರದರ್ಶಕತೆಯ ಉಲ್ಲಂಘನೆ ಆಗಿದೆ. ಇದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ಸರ್ಕಾರವು ಜರುಗಿಸಬೇಕೆಂದು ನಾನು ತಮ್ಮ ಮೂಲಕ ಒತ್ತಯ ಮಾಡುತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗು ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಮಾನ್ಯ ಬೃಹತ್ ನಿರಾವರಿ ಸಚಿವರು ಸದನದಲ್ಲಿಲ್ಲ. ಈ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಹಾಗಾಗಿ ಸಚಿವರು ಬಂದ ನಂತರ ಅವರಿಗೆ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪನವರು ನಿಮ್ಮ ವಿಷಯ, ಗೋಪಾಲ ಭಂಡಾರಿಯವರು ಮಾತನಾಡಿ.

9. ವಿಷಯ : ಸೈಟುಗಳನ್ನು ನೋಂದಣಿ ಮಾಡಿಸಿಕೊಳ್ಳುವ ಬಗ್ಗೆ.

ಶ್ರೀ ಹೆಚ್.ಗೋಪಾಲ ಭಂಡಾರಿ (ಕಾರ್ಕಳ) : ನಮ್ಮ ಜಿಲ್ಲೆಯಲ್ಲಿ ಜಿಲ್ಲಾಧಿಕರಿಗಳಿಂದ ಇತ್ತೀಚೆಗೆ ಒಂದು ಸುತ್ತೋಲೆ ಬಂದಿದೆ. ಎಲ್ಲಾ ಸಬ್ ರಿಜಿಸ್ಟ್ರಾರ್‌ಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಏನು residential purpose ಗೆ ಆದಂಥ ಭೂಮಿ ಏನಿವೆ ಅದನ್ನು ನೋಂದಾಯಿಸ ಬಾರದು ಇನ್ನೊಬ್ಬರಿಗೆ ಮಾರಾಟ ಪತ್ರವನ್ನು ನೋಂದಾವಣಿ ಮಾಡಬೇಕಾದರೆ Town Planning Authority ಯ approval ತೆಗೆದುಕೊಂಡು ಮಾಡಬೇಕೆಂದು ಹೇಳಿದ್ದಾರೆ. ಹಾಗೆಯೇ registration ಮಾಡಿದ್ದರೆ ಅದನ್ನು ಮಾಡಲೇಬಾರದು ಎಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. Town Planning Authority ಉಡುಪಿಯಲ್ಲಿದೆ, ನಮ್ಮ ತಾಲ್ಲೂಕಿನಲ್ಲಿಲ್ಲ. ಗ್ರಾಮೀಣ ಪ್ರದೇಶದಲ್ಲಿಲ್ಲ, ಅಂಥ ಪ್ರದೇಶಗಳಲ್ಲಿ ಅದಕ್ಕೆ Town Planning Authority ಯಿಂದ approval ತೆಗೆದುಕೊಂಡು ಬರದಿದ್ದರೆ ನಾವು ನೋದಾವಣಿ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ನಿರಾಕರಣೆ ಮಾಡುತ್ತಿದ್ದಾರೆ. ಇದರಿಂದಾಗಿ ಏನಾಗಿದೆ ಎಂದರೆ ಬಹಳಷ್ಟು ಜನ ಬೇರೆಯವರ ಹತ್ತಿರ ಸೈಟುಗಳನ್ನು ತೆಗೆದುಕೊಳ್ಳುವುದಕ್ಕೆ ಹೊರಟರೆ ನೋಂದಾವಣಿ ಆಗದೇ ಇರುವಂಥ ಪರಿಸ್ಥಿತಿ ಆಗಿದೆ. ಅದರ ಜೊತೆಗೆ ಏನಾದರೂ ಪಂಚಾಯತ್‌ನವರ NOC